# <u>ಇರಬೇಕು ಇಲ್ಲದಿರಬೇಕು</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 62.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 73.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 85.
4. **Note:** Lyrics given here are as per Ref. 1. The wordings in Ref. 2 are almost similar. Few wordings are different in Ref. 2 which are mentioned in yellow highlights.
5. **Note:** Singer has followed lyrics as in Ref. 2.

ರಾಗ: ನಾದನಾಮಕ್ರಿಯೆ ತಾಳ: ಆದಿ

ಇರಬೇಕು ಇಲ್ಲದಿರಬೇಕು ಶ್ರೀ
ಹರಿದಾಸರು ಸಂಸಾರದೊಳು || ಪ || (ಸಂಸಾರದೊಳಗೆ)

ಕುಲಸತಿಯಾದರೆ ಕೂಡಿರಬೇಕು
ಸುಲಭದಿಂದ ಸ್ವರ್ಗ ಸೂರಾಡಬೇಕು
ಕಲಹಗಂಟಿ ಸತಿ ಕರ್ಕಶೆಯಾದರೆ
ಹಲವು ಪರಿಯಿಂದಲಿ ಹೊರಗಾಗಬೇಕು || 1 ||

ಮಕ್ಕಳು ತಾವು ಮತಿವಂತರಾದರೆ
ಅಕ್ಕರೆಯಿಂದಲಿ ಕೂಡಿರಬೇಕು
ಚಿಕ್ಕತನದಿ ಬುದ್ಧಿ ತೇರುಂಡರಾದರೆ
ಫಕ್ಕನೆ ಅಲ್ಲಿಂದ ಹೊರಗಾಗಬೇಕು || 2 ||

ದುಷ್ಟರ ಕಂಡರೆ ದೂರವಿರಬೇಕು — ಹೀನರ ಕಂಡರೆ ಹಿಮ್ಮೆಟ್ಟಬೇಕು
ಶಿಷ್ಟರ ಕಂಡರೆ ಕೈ ಮುಗಿಯಬೇಕು — ಜ್ಞಾನಿಗಳ ಕಂಡರೆ ಕೈ ಮುಗಿಯಬೇಕು
ದಿಟ್ಟ ಶ್ರೀ ಪುರಂದರ ವಿಠಲ ರಾಯನ — ಮಾನಿ ಶ್ರೀ ಪುರಂದರ ವಿಠ್ಠಲ ರಾಯನ

ಗಟ್ಟಿಯಾಗಿ ಆತನ ನೆರೆ ನಂಬಬೇಕು || 3 || ನಾನಾ ಬಗೆಯಿಂದ ಕೊಂಡಾಡಬೇಕು

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಇರಬೇಕು ಇಲ್ಲದಿರಬೇಕು** = ಇದ್ದರೂ ಹಚ್ಚಿಕೊಳ್ಳದಂತಿರಬೇಕು

**ಕುಲಸತಿ** = ಪತಿವ್ರತೆ

**ತೇರುಂಡರು** = ವಿಚಾರಗೇಡಿ, ಹುಂಬ

**ಘಕ್ಕನೆ = ಗಕ್ಕನೆ** = ಬೇಗನೆ

**ವಿ.ಸೂ. : -** ಒಳ್ಳೆಯ ಸಂಸಾರವಿದ್ದರೆ ಭಕ್ತನು ತನ್ನ ಆದರ್ಶವನ್ನು ಸಾಧಿಸಬಹುದೆಂದು, ಹೆಂಡಿರು ಮಕ್ಕಳು ದುಷ್ಟರಾದರೆ ಭಕ್ತ ಅಂತಹ ಸಂಸಾರವನ್ನು ಬಿಟ್ಟು ಹೊರಬೀಳುವುದು ಲೇಸೆಂದು ದಾಸರ ಅಭಿಪ್ರಾಯ.

**Classification:** Keerthane
**Ankita:** sri purandara vittala
**Location:** NA
**Category:** Jeevana Darshana, Artha Bhava
**Sub-Category:** samsara, pativrate, sati, Swarga, makkalu, buddi, kai,
**Pravachana:** NA
**Explanation:** NA